SRI DEVARAJ URS ACADEMY OF HIGHER EDUCATION & RESEARCH
SRI DEVARAJ URS MEDICAL COLLEGE
Tamaka, Kolar
UNIVERSITY LIBRARY & LEARNING RESOURCE CENTRE

**Online Newspaper Clipping Service**
**Dtd- Thursday, 11th September 2025**



ಕೋಲಾರಪತ್ರಿಕೆ

# ದೇವರಾಜ್ ಅರಸ್ ಉನ್ನತ ಶಿಕ್ಷಣ ಮತ್ತು ಸಂಶೋಧನ ಸಂಸ್ಥೆಯ ಸ್ಕೂಲ್ ಆಫ್ ಲಾ ತರಗತಿಗಳ ಪ್ರಾರಂಭೋತ್ಸವ



ಕೋಲಾರ: ಪ್ರಸ್ತುತ ೨೦೨೫ – ೨೬ನೇ ಶೈಕ್ಷಣಿಕ ವರ್ಷದಿಂದ ಶ್ರೀ ದೇವರಾಜ ಅರಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯು ಮೂರು ವರ್ಷಗಳ ಕಾನೂನು ಪದವಿಯನ್ನು ಆರಂಭಿಸಿದ್ದು, ತರಗತಿಗಳ ಪ್ರಾರಂಭೋತ್ಸವವು ಕಾನೂನು ಶಾಲಾ ವಿಭಾಗದ ಸೆಮಿನಾರ್ ಹಾಲ್‌ನಲ್ಲಿ ನಡೆಯಿತು.

ವಿಶ್ವವಿದ್ಯಾಲಯದ ಕುಲಪತಿ ಜಿ.ಹೆಚ್ ನಾಗರಾಜ್, ಎಸ್.ಡಿ.ಯು.ಇ ಟ್ರಸ್ಟಿನ ಉಪಾಧ್ಯಕ್ಷ ಜೆ ರಾಜೇಂದ್ರ, ಕಾರ್ಯದರ್ಶಿ ಕೆ.ಜಿ ಹನುಮಂತರಾಜು, ಉಪ ಕುಲಪತಿ ಡಾ.ಡಿ. ವೆಂಗಮ್ಮ ಶುಭ ಹಾರೈಕೆಗಳೊಂದಿಗೆ ಕಾರ್ಯಕ್ರಮವನ್ನು ಆರಂಭಿಸಲಾಯಿತು.

ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ಡಾ.ಡಿ.ವಿ.ಎಲ್.ಎನ್ ಪ್ರಸಾದ್ ಮಾತನಾಡಿ, ವಿದ್ಯಾರ್ಥಿಗಳಿಗೆ ಕಾನೂನು ಶಿಕ್ಷಣದ ಮಹತ್ವ, ಸಾಮಾಜಿಕ ಹೊಣೆಗಾರಿಕೆ, ನೈತಿಕ ಮೌಲ್ಯಗಳು ಹಾಗೂ ವಿದ್ಯಾರ್ಥಿ ಜೀವನದಲ್ಲಿ ಪಾಲಿಸಬೇಕಾದ ಮೂಲಭೂತ ತತ್ವಗಳ ಕುರಿತು ಮನದಟ್ಟು ಮಾಡಿಕೊಟ್ಟರು.

ಸಂಸ್ಥೆಯ ಕುಲಸಚಿವ ಡಾ. ಮುನಿನಾರಾಯಣ ಮಾತನಾಡಿ, ಇದೇ ಮೊದಲ ಬಾರಿಗೆ ಈ ಶೈಕ್ಷಣಿಕ ಸಂಸ್ಥೆಯು ವೈದ್ಯಕೀಯ ಶಿಕ್ಷಣ ಕ್ಷೇತ್ರದ ಜೊತೆಗೆ ಕಾನೂನು ಶಿಕ್ಷಣವನ್ನು ಆರಂಭಿಸಿದೆ. ಮೊದಲನೇ ಸಾಲಿನ ವಿದ್ಯಾರ್ಥಿಗಳಾದ ನಿಮ್ಮ ಮೇಲೆ ಸಂಸ್ಥೆಯ ಘನತೆಯನ್ನು ಎತ್ತಿ ಹಿಡಿಯುವ ಹೊಣೆಗಾರಿಕೆ ಇದೆ. ಉತ್ತಮ ಜ್ಞಾನವನ್ನು ಪಡೆದು ಸಮಾಜಕ್ಕೆ ಉಪಯುಕ್ತವಾಗುವ ವಕೀಲರು ಆಗಬೇಕು ಎಂದು ಹೇಳಿ ಶುಭ ಹಾರೈಸಿದರು.

ಕಾನೂನು ಶಾಲೆಯ ಪ್ರಾಂಶುಪಾಲ ಡಾ. ಕೌಶಿಕ್ ಸಿ. ಮಾತನಾಡಿ, ಸಂಸ್ಥೆಯ ಸಹಕಾರವನ್ನು ಸ್ಮರಿಸಿದರು. ವಿದ್ಯಾರ್ಥಿಗಳು, ಬೋಧಕ ಮತ್ತು ಬೋಧಕೇತರ ವರ್ಗದ ನಾವೆಲ್ಲರೂ ಸೇರಿ ನಮ್ಮ ವಿಭಾಗದ ಪ್ರತಿಷ್ಠೆ ಮತ್ತು ಗೌರವವನ್ನು ಸೃಷ್ಟಿಸುವ ಹೊಣೆಗಾರಿಕೆಯನ್ನು ಹೊಂದಿದ್ದೇವೆ. ಒಟ್ಟಿಗೆ ಕೂಡಿ ಸಂಸ್ಥೆಯ ಒಳಿತಿಗಾಗಿ ದುಡಿಯೋಣ. ವಿದ್ಯಾರ್ಥಿಗಳಾದ ನೀವು ಕಾನೂನು ಶಿಕ್ಷಣವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಉಜ್ವಲ ಭವಿಷ್ಯವನ್ನು ಕಟ್ಟಿಕೊಳ್ಳಬೇಕೆಂದು ಹರಸಿದರು.

ಶ್ರೀ ದೇವರಾಜ್ ಅರಸ್ ಮೆಡಿಕಲ್ ಕಾಲೇಜಿನ ಉಪ ಪ್ರಾಂಶುಪಾಲೆ ಡಾ. ವಿನುತಾ ಶಂಕರ್ ಎಂ.ಎಸ್, ಪರೀಕ್ಷಾ ನಿಯಂತ್ರಕ ಡಾ.ಶಶಿಧರ್ ಕೆ, ಕಾನೂನು ಸಹಾಯಕ ವಿಜಯಕುಮಾರ್, ಕಾನೂನು ವಿಭಾಗದ ವಿದ್ಯಾರ್ಥಿ ಕಲ್ಯಾಣಾಧಿಕಾರಿ ಅಂಜುಮ್ ಮೊಹಮದಿ, ಕಾರ್ಯಕ್ರಮದ ಸಂಯೋಜಕ ಮದನ್ ಡಿ.ಡಿ, ಸಹಾಯಕ ಗ್ರಂಥಪಾಲಕ ಮಂಜುನಾಥ ಕೆ.ಎಂ, ಬೋಧಕೇತರ ವರ್ಗದ ಭಾಗ್ಯಶ್ರೀ, ಶಶಿಕಲಾ ಇದ್ದರು. ಸಹಾಯಕ ಪ್ರಾಧ್ಯಾಪಕಿ ವಿದ್ಯಾ ನಿರೂಪಿಸಿ ವಂದಿಸಿದರು.